# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಗುಲ್ಬರ್ಗಾ ಪಿಹೆಚ್‌ಇ ಮೆಕ್ಯಾನಿಕಲ್ ವಿಭಾಗದಲ್ಲಿ ಡೀಸೆಲ್ ಮತ್ತು ಆಯಿಲ್ ದುರ್ಬಳಕೆ ಮಾಡಿ ಅವ್ಯವಹಾರ ಎಸಗಿರುವ ಇಂಜಿನಿಯರ್‌ಗಳಿಗೆ ವಿಧಿಸಿರುವ ದಂಡನೆಯನ್ನು ರದ್ದುಗೊಳಿಸುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 119 ಇಎನ್‌ಕ್ಯೂ 1996 ದಿನಾಂಕ 31-12-1999.
2. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ 842-845/2000 ದಿನಾಂಕ 15-01-2013ರಲ್ಲಿ ನೀಡಿರುವ ಆದೇಶ.
3. ಶ್ರೀ ಹೆಚ್.ಎನ್.ಪುನಶೆಟ್ಟಿ, ಸಹಾಯಕ ಇಂಜಿನಿಯರ್, ಶ್ರೀ ಅಹಮ್ಮದ್ ಹುಸೇನ್, ಕಿರಿಯ ಇಂಜಿನಿಯರ್ (ನಿವೃತ್ತ), ಶ್ರೀ ರಫಿವುದ್ದೀನ್, ಸಹಾಯಕ ಇಂಜಿನಿಯರ್, ಶ್ರೀ ವಿಜಯಕುಮಾರ್, ಕಿರಿಯ ಇಂಜಿನಿಯರ್ (ನಿವೃತ್ತ) ಮತ್ತು ಶ್ರೀ ಮಹ್ಮದ್ ಸೈದುದ್ದೀನ್, ಕಿರಿಯ ಇಂಜಿನಿಯರ್ (ನಿವೃತ್ತ) ರವರುಗಳು ಸಲ್ಲಿಸಿರುವ ಮನವಿಗಳ ದಿನಾಂಕ 23-02-2013.

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 31-12-1999ರ ಸರ್ಕಾರದ ಆದೇಶದಲ್ಲಿ ಪಿ.ಹೆಚ್.ಇ. ಮೆಕ್ಯಾನಿಕಲ್ ವಿಭಾಗ, ಗುಲ್ಬರ್ಗಾ ಇಲ್ಲಿ ಡೀಸೆಲ್ ಮತ್ತು ಆಯಿಲ್ ದುರ್ಬಳಕೆ ಮಾಡಿ ಅವ್ಯವಹಾರವೆಸಗಿದ್ದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಿ ಈ ಕೆಳಕಂಡ ಒಟ್ಟು 10 ಮಂದಿ ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್ / ಪಂಪ್ ಆಪರೇಟರ್‌ಗಳ ವಿರುದ್ಧ ರುಜುವಾತಾದ ಆರೋಪಗಳಿಗನುಸಾರ ಸರ್ಕಾರಕ್ಕೆ ಉಂಟಾದ ನಷ್ಟವನ್ನು ವಸೂಲಿ ಮಾಡಲು ಹಾಗೂ ಆರೋಪಿತರ ಒಂದು ವಾರ್ಷಿಕ ಮುಂಬಡ್ತಿಯನ್ನು ಸಂಚಿತ ಆಧಾರದ ಮೇಲೆ ತಡೆಹಿಡಿಯುವ ದಂಡನೆಯನ್ನು ವಿಧಿಸಲಾಗಿತ್ತು:-

| ಕ್ರಮ ಸಂಖ್ಯೆ | ಆಪಾದಿತ ನೌಕರರ ಹೆಸರು ಮತ್ತು ಪದನಾಮ | ಸರ್ಕಾರಕ್ಕೆ ನಷ್ಟ ಆಗಿರುವ ಹಣ ರೂ.ಗಳಲ್ಲಿ |
|---|---|---|
| 1. | ಶ್ರೀ ಹೆಚ್.ಎಸ್.ಪುನಶೆಟ್ಟಿ, ಸಹಾಯಕ ಇಂಜಿನಿಯರ್ | 99333-00 |
| 2. | ಶ್ರೀ ರಫಿಯುದ್ದೀನ್, ಸಹಾಯಕ ಇಂಜಿನಿಯರ್ | 53212-00 |
| 3. | ಶ್ರೀ ವಿಜಯ್ ಕುಮಾರ್, ಸಹಾಯಕ ಇಂಜಿನಿಯರ್ | 73942-00 |
| 4. | ಶ್ರೀ ಬಸವರಾಜ್ ಸಜ್ಜನ ಶೆಟ್ಟಿ, ಸಹಾಯಕ ಇಂಜಿನಿಯರ್ | 27201-45 |
| 5. | ಶ್ರೀ ಅಹಮ್ಮದ್ ಹುಸೇನ್, ಕಿರಿಯ ಇಂಜಿನಿಯರ್ | 51993-80 |
| 6. | ಶ್ರೀ ಎಸ್.ಎ.ಎಂ.ಖಾದ್ರಿ,ಕಿರಿಯ ಇಂಜಿನಿಯರ್ | 99632-30 |
| 7. | ಶ್ರೀ ಮಿಲನ್ ಕುಮಾರ್,ಕಿರಿಯ ಇಂಜಿನಿಯರ್ | 19985-00 |
| 8. | ಶ್ರೀ ಎಸ್.ಆರ್.ಶಿರವಾಳ್, ಕಿರಿಯ ಇಂಜಿನಿಯರ್ | 20010-00 |
| 9. | ಶ್ರೀ ಮಹಮ್ಮದ್ ಸೈದುದ್ದೀನ್, ಕಿರಿಯ ಇಂಜಿನಿಯರ್ | 7371-10 |
| 10. | ಶ್ರೀ ಕೆ.ಆರ್.ಈಶ್ವರಯ್ಯ, ಪಂಪ್ ಆಪರೇಟರ್ | 24333-40 |

ಮೇಲ್ಕಂಡ ದಿನಾಂಕ. 31-12-1999ರ ಸರ್ಕಾರದ ಆದೇಶವನ್ನು ಶ್ರೀ ರಫಿಯುದ್ದೀನ್, ಸಹಾಯಕ ಇಂಜಿನಿಯರ್ ಹಾಗೂ ಮತ್ತಿತರರು ಕರ್ನಾಟಕ ಆಡಳಿತ ನ್ಯಾಯ

ಮಂಡಳಿಯಲ್ಲಿ ಪ್ರಶ್ನಿಸಿದ್ದು, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 15-01-2013ರ ಆದೇಶದಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ. 842-845/2000 ರಲ್ಲಿ ಸರ್ಕಾರದ ದಿನಾಂಕ 31-12-1999ರ ಆದೇಶವನ್ನು ರದ್ದುಗೊಳಿಸಿ, ಅರ್ಜಿದಾರರಿಗೆ ಲಭ್ಯವಾಗುವ ಎಲ್ಲಾ ಸೌಲಭ್ಯಗಳನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಹೊರಡಿಸಿದ ಆದೇಶದ ದಿನಾಂಕದಿಂದ 3 ತಿಂಗಳೊಳಗಾಗಿ ಮಂಜೂರು ಮಾಡುವಂತೆ ಆದೇಶಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 23-02-2013ರಂದು ಶ್ರೀ ರಫೀವುದ್ದೀನ್ ಮತ್ತು ಇತರರು ಸಲ್ಲಿಸಿರುವ ಮನವಿಗಳಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ 842-45/2000 ದಿನಾಂಕ 15-01-2013ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 119 ಇಎನ್‌ಕ್ಯೂ 96 ದಿನಾಂಕ 31-12-1999ರ ಆದೇಶವನ್ನು ರದ್ದುಗೊಳಿಸಲಾಗಿರುವ ಹಿನ್ನೆಲೆಯಲ್ಲಿ ಅವರುಗಳಿಗೆ ಬರಬೇಕಾಗಿರುವ ಎಲ್ಲಾ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಕೋರಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ. ಗ್ರಾಅಪ 187 ಜಿಪಅ 2009 ಬೆಂಗಳೂರು ದಿನಾಂಕ 04-04-2013</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ 842-45/2000 ದಿನಾಂಕ 15-01-2013ರ ಆದೇಶದನ್ವಯ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 119 ಇಎನ್‌ಕ್ಯೂ 96 ದಿನಾಂಕ 31-12-1999ನ್ನು ರದ್ದುಗೊಳಿಸಲಾಗಿದೆ. ಅರ್ಜಿದಾರರಿಗೆ ಲಭ್ಯವಾಗುವ ಎಲ್ಲಾ ತತ್ಸಂಬಂಧ (Consequential) ಆರ್ಥಿಕ ಸೌಲಭ್ಯಗಳನ್ನು ಕೂಡಲೇ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

4/4/2013

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ /
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
4. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗುಲ್ಬರ್ಗಾ.
7. ಸಂಬಂಧಪಟ್ಟ ಅಧಿಕಾರಿ /ನೌಕರರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗುಲ್ಬರ್ಗಾ ರವರ ಮುಖಾಂತರ
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ) / (ಸೇವೆಗಳು-ಸಿ)
9. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಅಪರ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
10. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
11. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.